## ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಹೊಸನಗರ

ಸಿ ಸಿ ನಂ.**942/2026**

ಫಿರ್ಯಾದಿಃ ರಿಪ್ಪನ್‌ಪೇಟೆ ಪೋಲಿಸ್ ಠಾಣೆ, ಹೊಸನಗರ ತಾಲ್ಲೂಕು

ವಿರುದ್ಧ

ಆರೋಪಿಃ ಶಿವಕುಮಾರ ತಂದೆಃ ಶಂಕರನಾಯ್ಕ
ವಯಸ್ಸುಃ 33 ವರ್ಷ,
ವಾಸಃ ತಟ್ಟಿಕೇರಿ ಗ್ರಾಮ, ತೀರ್ಥಹಳ್ಳಿ ತಾಲ್ಲೂಕು

ಆರೋಪಣೆ

ದಿಃ 12-11-2025 ರಂದು ಸಂಜೆ 06-30 ಗಂಟೆ ಸಮಯದಲ್ಲಿ ರಿಪ್ಪನಪೇಟೆ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಸಾಕ್ಷಿ-1 ರವರು ತಮ್ಮ ಕೆಎ-18-ಜೆ-1693 ನೇ ನಂಬರಿನ ಹಿರೋ ಹೊಂಡ ಸಿ.ಡಿ.-100 ಬೈಕನ್ನು ಚಲಾಯಿಸಿಕೊಂಡು ರಿಪ್ಪನಪೇಟೆಕಡೆಯಿಂದ ಅರಸಾಳು ಗ್ರಾಮಕ್ಕೆ ಹೋಗುತ್ತಿರುವಾಗ ರಿಪ್ಪನಪೇಟೆಯ ಶ್ರೀ ವೀರಭದ್ರೇಶ್ವರ ಬೈಕ್ ಅಂಡ್ ಕಾರ್ ಡೆಕೊರೆಟರ್ ಅಂಗಡಿಯ ಮುಂಭಾಗದ ಟಾರ್ ರಸ್ತೆಯಲ್ಲಿ ಶಿವಮೊಗ್ಗ ಕಡೆಯಿಂದ ಕೆಎ-14-ಸಿ-9406 ನಂಬರಿನ ಗೂಡ್ಸ್ ವಾಹನವನ್ನು ಆರೋಪಿಯಾದ ನೀವು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸಾಕ್ಷಿ-1 ರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ಕೆಎ-18-ಜೆ-1693 ದ್ವಿ ಚಕ್ರ ವಾಹನಕ್ಕೆ ಎದುರುಗಡೆಯಿಂದ ಡಿಕ್ಕಿ ಹೊಡೆಸಿ ಅಪಘಾತಪಡಿಸಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಹಾಗೂ ಅದು ನನ್ನ ಸಂಜ್ಞೆಯಲ್ಲಿ ಇರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಯಾದ ನೀವು ನಿಮ್ಮಕೆಎ-14-ಸಿ-9406 ನಂಬರಿನ ಗೂಡ್ಸ್ ವಾಹನವನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲಯಿಸಿಕೊಂಡು ಬಂದು ಸಾಕ್ಷಿ-1 ರವರು ಚಾಲನೆ ಮಾಡುತ್ತಿದ್ದ ಕೆಎ-18-ಜೆ-1693 ದ್ವಿ ಚಕ್ರ ವಾಹನಕ್ಕೆ ಎದುರುಗಡೆಯಿಂದ ಡಿಕ್ಕಿ ಹೊಡೆಸಿ ಅಪಘಾತಪಡಿಸಿದ್ದರ ಪರಿಣಾಮ ಸಾಕ್ಷಿ-1 ರವರು ಬೈಕಿನ ಸಮೇತ ರಸ್ತೆಯ ಮೇಲೆ ಬಿದ್ದ ಪರಿಣಾಮ ಇವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ 125(ಬಿ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಹಾಗೂ ಅದು ನನ್ನ ಸಂಜ್ಞೆಯಲ್ಲಿ ಇರುತ್ತದೆ.

ಈ ಮೇಲ್ಕಂಡ ಆರೋಪಣೆ ಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

ಪ್ರಶ್ನೆ: ಈಗ ಮೇಲೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪವನ್ನು ಒಪ್ಪಿಕೊಳ್ಳುವಿಯೋ? ಅಥವಾ ವಿಚಾರಣೆಯಾಗಬಯಸುವೆಯೋ?

ಉತ್ತರ:

ಈ ಮೇಲ್ಕಂಡ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ 2 ನೇ ಆರೋಪಿಗೆ ಓದಿ ಹೇಳಿ ಕೇಳಲಾಗಿ ಅವರು ನೀಡಿದ ಉತ್ತರವನ್ನು ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು.

ದಿನಾಂಕ: 19-06-2026.

(ಶ್ರೀ ಫಾರೂಖ ಝಾರೆ )
ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಹೊಸನಗರ

ಆರೋಪಿಯ ಸಹಿ: